**ಸಾಕ್ಷಿಯನ್ನು ದಿಃ 28.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮಧ್ಯಂತರ ಅರ್ಜಿಗಳ ಮೇಲಿನ ಆದೇಶದ ಮೇರೆಗೆ ಪಾಟೀ ಸವಾಲುಃ 10 ಪ್ರತಿವಾದಿ ಪರ ಶ್ರೀ ಎಲ್.ಕೆ.ಜೆ ವಕೀಲರಿಂದಃ-**

ನಾನು ಈ ದಾವೆಯನ್ನು ಜಮೀನುಬೇಕೆಂದು ಮಾಡಿರುತ್ತೇನೆ. ಈ ದಾವೆಯಲ್ಲಿ 10 ನೇ ಪ್ರತಿವಾದಿ ಪ್ರಜ್ವಲ್ ಎಂಬುವವರನ್ನು ಯಾವ ಕಾರಣಕ್ಕೆ ಪಕ್ಷಗಾರರನ್ನಾಗಿ ಮಾಡಿದ್ದಿರಾ ಎಂದರೆ ಸಾಕ್ಷಿ ಜಮೀನು ತೆಗೆದುಕೊಂಡಿರುವ ಕಾರಣಕ್ಕೆ ಮಾಡಿರುತ್ತೇನೆ ಎನ್ನುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ಅಣ್ಣನ ಹೆಂಡತಿ ಮತ್ತು ಮಗಳು ಇರುತ್ತಾರೆ. ಈ ಕೇಸ್ ಹಾಕಲು ಮಾಹಿತಿಯನ್ನು ವಕೀಲರಿಗೆ ನಾವೆ ಕೊಟ್ಟಿರುತ್ತೇವೆ. ಈ ಕೇಸ್ ನಲ್ಲಿ ವಕೀಲರು ಏನೇನು ಬರೆದುಹಾಕಿದ್ದಾರೆ ಎಂದು ಗೊತ್ತು. ಪ್ರಜ್ವಲ್ ರವರು ಯಾವಾಗ ಜಮೀನನ್ನು ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ಹಾಕುವ ಮೊದಲು ಖರೀದಿಸಿದ್ದರೂ ಅಥವಾ ದಾವೆ ಹಾಕಿದ ನಂತರ ಖರೀದಿಸಿದ್ದರೊ ಎಂದು ಗೊತ್ತಿಲ್ಲ. ನಮ್ಮ ವಕೀಲರಿಗೆ ಮಾಹಿತಿ ನೀಡುವಾಗ ಪ್ರಜ್ವಲ್ ರವರಿಗೆ ಎಲ್ಲರೂ ಸೇರಿ ದಾವೆ ಹಾಕುವ ಮೊದಲು ಮಾರಾಟ ಮಾಡಲು ಪ್ರಯತ್ನ ಪಟ್ಟಿದ್ದರಾ ಅಥವಾ ದಾವೆ ಹಾಕಿದ ನಂತರ ಮಾರಾಟ ಮಾಡಲು ಪ್ರಯತ್ನ ಪಟ್ಟಿದ್ದರಾ ಎಂದರೆ ಸಾಕ್ಷಿ ದಾವೆ ಹಾಕಿದ ನಂತರ ಮಾರಾಟ ಮಾಡಿದ್ದಾರೆ ಎಂದು ಗೊತ್ತಾಯಿತು ಎನ್ನುತ್ತಾರೆ.

ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 2005 ರಲ್ಲಿ ವಿಭಾಗ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಹಾಗೆ ವಿಭಾಗ ಆಗುವ ಸಮಯದಲ್ಲಿ ನನ್ನ ಅಣ್ಣ ವಿಜಯ್ ಬದುಕಿದ್ದರು. 10 ನೇ ಪರತಿವಾದಿಗೆ ಮಾರಾಟ ಮಾಡಿದ ಜಮೀನು ಹಾಗೆ ವಿಭಾಗ ಮಾಡಿಕೊಂಡ ಸಮಯದಲ್ಲಿ ಅಣ್ಣ ವಿಜಯ್ ರವರ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಮರೂರು ಗ್ರಾಮದ ಸರ್ವೆ ನಂ. 370/9 ರ 25 ಗುಂಟೆ ಜಮೀನು ಅಣ್ಣ ವಿಜಯ್ ರವರ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರು ಬದುಕಿದ್ದಾಗ ಅವರ ಹೆಸರಿನಲ್ಲಿ ಸದರಿ ಜಮೀನಿನ ಖಾತೆ ಇದ್ದು ಅವರು ತೀರಿಕೊಂಡ ನಂತರ ಅವರ ಹೆಂಡತಿ ಮಗಳಾದ ಪ್ರತಿವಾದಿ 2 ಮತ್ತು 3 ರವರ ಹೆಸರಿಗೆ ಪೌತಿ ಖಾತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಗಂಡ ತೀರಿಕೊಂಡ ನಂತರ 2 ನೇ ಪ್ರತಿವಾದಿ ತನ್ನ ಮಗಳು 3 ನೇ ಪ್ರತಿವಾದಿ ಮಗಳ ಮದುವೆ ಖರ್ಚಿಗೆಂದು 2020-2021 ರಲ್ಲಿ 10 ನೇ ಪ್ರತಿವಾದಿಗೆ ಸರ್ವೆ ನಂ. 370/9 ರ ಜಮೀನನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಿಮ್ಮ ತಂದೆಗೆ ಎಷ್ಟು ಸರ್ವೆ ನಂಬರ್ ಗಳಲ್ಲಿ ಎಷ್ಟು ಜಮೀನುಗಳು ಇತ್ತು ಎಂದರೆ ಒಟ್ಟು 7 ಎಕರೆ ಇತ್ತು ಎನ್ನುತ್ತಾರೆ. ನನ್ನ ತಂದೆ ಹೆಸರು ಕರೀಗೌಡ. ನಮ್ಮ ತಂದೆಯ ಅಪ್ಪನ ಹೆಸರು ಮೂಗೇಗೌಡ.ಸೀತಮ್ಮ ನನ್ನ

ತಾಯಿ. ನಮ್ಮ ತಂದೆ ಹೆಸರಿಗೆ ವಾರಂಚಿ ಗ್ರಾಮದ ಸರ್ವೆ ನಂ. 25/39, 40, 41 ಬಿ ನಲ್ಲಿ ಒಟ್ಟು 4 ಎಕರೆ 38 ಗುಂಟೆ ನನ್ನ ತಂದೆ ಕರೀಗೌಡರಿಗೆ ಸಾಗುವಳಿ ಮೂಲಕ ಬಂದ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಈ ಕೇಸ್ ನಲ್ಲಿ ಸೇರಿಸಿಲ್ಲ ಎಂದರೆ ಸರಿ. 2005 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಾಗ ವಾರಂಚಿ ಗ್ರಾಮದ ಸ್ವತ್ತನ್ನು ನನಗೆ ಬಿಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನನಗೆ ಕೊಟ್ಟಂತಹ ಸ್ವತ್ತನ್ನು ಹೊರತು ಪಡಿಸಿ ವಿಭಾಗ ಪತ್ರದಲ್ಲಿ ಆದಂತಹ ಜಮೀನುಗಳ ಸಂಬಂಧ ದಾವೆ ಹಾಕಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ವಾರಂಚಿ ಗ್ರಾಮದ ಸ್ವತ್ತನ್ನು ಈ ಕೇಸ್ ನಲ್ಲಿ ಸೇರ್ಪಡೆ ಮಾಡದ ಕಾರಣ ಈ ದಾವೆ ಊರ್ಜಿತ ಅಲ್ಲ ಎಂದರೆ ಸಾಕ್ಷಿ ವಾರಂಚಿ ಗ್ರಾಮದ ಸ್ವತ್ತು ನಮ್ಮ ತಂದೆಯದಲ್ಲ ಎನ್ನುತ್ತಾರೆ. ಸದರಿ ಸ್ವತ್ತನ್ನು ಸೇರಿಸಿದರೆ ನನಗೆ ತೊಂದರೆ ಆಗುತ್ತದೆ ಎಂದು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸದರಿ ಸ್ವತ್ತು ನನ್ನ ತಂದೆಯದು ಅಲ್ಲ, ತಾತನದು ಅಲ್ಲ ಎಂದು ಹೇಳುತ್ತಾರೆ. ಸದರಿ ಸ್ವತ್ತನ್ನು ದಾವೆಯನ್ನು ಸೇರಿಸದ ಈಗಾಗಲೆ ವಿಭಾಗ ಆದ ಸ್ವತ್ತಿನ ಮೇಲೆ ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗದಲ್ಲಿ ವಿಜಯ್ ರವರ ಪಾಲಿಗೆ ಬಂದಂತಹ ಸ್ವತ್ತಿನಲ್ಲಿ ಮೇಲೆ ನನಗೆ ಯಾವುದೆ ಹಕ್ಕು ಅಧಿಕಾರ ಇಲ್ಲದಿದ್ದರೂ ಸುಳ್ಳು ಕೇಸ್ ಅನ್ನು ಹಾಕಿಕೊಂಡು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.